(ಇಂದು ದಿನಾಂಕಃ 07–02–2026 ರಂದು ಸಾಕ್ಷಿಯನ್ನು ತೆರೆದ ನ್ಯಾಯಾಲಯಕ್ಕೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.)

ಮುಂದುವರೆದ ಪಾಟೀಸವಾಲು ಃ ಶ್ರೀ ಕೆ ಎನ್ ಕೆ ವಕೀಲರಿಂದ ಃ-

5) ಸಾಕ್ಷಿಗೆ ಈಗ ನಿಪಿ-1 ದಾಖಲೆಯನ್ನು ಪರಿಶೀಲಿಸಲು ನೀಡಿ ಸಾಕ್ಷಿಯು ನನಗೆ ಓದು ಬರಹ ಬರುವುದಿಲ್ಲ ಎಂದು ನುಡಿಯುತ್ತಾರೆ. ನಾನು ಹಾಜರು ಪಡಿಸಿದ ದಾಖಲೆಗಳನ್ನು ನನ್ನ ವಕೀಲರ ಬಳಿ ನಾನೇ ನೀಡಿರುತ್ತೇನೆ. ನಾನು ಹಾಜರು ಪಡಿಸಿದ ದಾಖಲೆಗಳು ನನಗೆ ಗೊತ್ತಾಗುವುದಿಲ್ಲ ಎಂದರೆ ಸರಿ. ದಾವಾ ಆಸ್ತಿಗಳಲ್ಲಿ ಪಿತ್ರಾರ್ಜಿತ ಆಸ್ತಿಗಳು ಯಾವುದು ಎಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿಯಲ್ಲಿ ಏಕತ್ರ ಗರಾಣೆಯ ಆಸ್ತಿ ಯಾವುದು ಎಂದು ಕೇಳಲಾಗಿ ಸಾಕ್ಷಿಯು ನನಗೆ ನಿಖರವಾಗಿ ಹೇಳಲು ಆಗುವುದಿಲ್ಲ ಹೆಸರು ಹೇಳಿದರೆ ಹೇಳುತ್ತೇನೆ ಎಂದು ನುಡಿಯುತ್ತಾರೆ.

6) ದಾವಾ ಆಸ್ತಿಗಳ ಸಂಖ್ಯೆ ಕೇಳಲಾಗಿ ಸಾಕ್ಷಿಯು ನನ್ನ ಅಜ್ಜನ ಹೆಸರು ಹಾಗೂ ಇತರರು ಹೆಸರು ಹೇಳಿದರೆ ನುಡಿಯುತ್ತೇನೆ. ಆಸ್ತಿ ಸಂಖ್ಯೆಗಳನ್ನು ಹೇಳಲು ಬರುವುದಿಲ್ಲ. ದಾವಾ ಆಸ್ತಿಯ ಮೂಲ ಸಂಖ್ಯೆ 416/7 ಎಂದು ನುಡಿದಿರುತ್ತೇನೆ ಅದರಲ್ಲಿ ಒಟ್ಟು 3 ವಿಭಾಗಗಳು ಆಗಿರುತ್ತವೆ. ಸದರಿ ವಿಭಾಗಗಳ ಪ್ರತ್ಯಕ ಸರ್ವೆ ಸಂಖ್ಯೆಯನ್ನು ಹಾಗೂ ಕ್ಷೇತ್ರ ಹೇಳಲು ಬರುವುದಿಲ್ಲ. ಸದರಿ ದಾವಾ ಆಸ್ತಿಗಳ ಬಗ್ಗೆ ನಿಖರವಾದ ಮಾಹಿತಿ ಇಲ್ಲದೇ ಇದ್ದರು ಸಹ ಸುಳ್ಳು ದಾವೆ ಹಾಕಿರುತ್ತೇನೆ ಅಂದರೆ ಸರಿಯಲ್ಲ.

7) ದಿನಾಂಕ 01-04-2023 ರಂದು ದಾವಾ ಆಸ್ತಿಗೆ ಸಂಬಂದಿಸಿದಂತೆ ನಮ್ಮ ಮನೆಯಲ್ಲಿ ಘಟನೆಗಳು ನಡೆದಿರುತ್ತದೆ. ಗುಮ್ಮಗೋಳ ಗ್ರಾಮದಲ್ಲಿ 1 ಎಕ್ರೆ ಜಮೀನಿಗೆ ಅಂದಾಜು ಮಾರುಕಟ್ಟೆ ಬೆಲೆ 5 ಸಾವಿರ ರೂಪಾಯಿ ಇರುತ್ತದೆ. ನಮ್ಮ ಮನೆಗೆ ಮಾರುಕಟ್ಟೆ ಬೆಲೆ 3 ರಿಂದ 3.5 ಸಾವಿರ ರೂಪಾಯಿ ಆಗುತ್ತದೆ. ಸಾಕ್ಷಿಗೆ ವಾದ ಪತ್ರದ ದಾವಾ ಆಸ್ತಿಯ ವರ್ಣನೆಯಲ್ಲಿ ನಮೂದಿಸಿದ ಎರಡೂ ಆಸ್ತಿಗಳ ಅಂದಾಜು ಕಿಮ್ಮತ್ತನ್ನು ಓದಿ ಹೇಳಲಾಗಿ ಸಾಕ್ಷಿಯು ಅದು ಸರಿಯಲ್ಲ ನಾನು ಹೇಳಿ ಬರೆಸಿಲ್ಲ ಎಂದು ನುಡಿಯುತ್ತಾರೆ. ಸದರಿ ಬೆಲೆಯನ್ನು ಯಾರು ಬರೆಯಿಸಿ ಹಾಕಿರುತ್ತಾರೆ ಎಂದರೆ ಸಾಕ್ಷಿಯು ಅಷ್ಟು ಇರುವುದಿಲ್ಲ ಎಂದು ನುಡಿದು ಸಂಮಜಸವಾದ ಉತ್ತರ ನೀಡುತ್ತಿಲ್ಲ.

8) ಗುಮ್ಮಗೋಳ ಗ್ರಾಮದಲ್ಲಿ ಹೊಲಗಳಿಗೆ ತಲಾ 1 ಎಕ್ರೆಗೆ 25 ಲಕ್ಷ ರೂಪಾಯಿ ಮಾರುಕಟ್ಟೆ ಬೆಲೆ ಇರುತ್ತದೆ ಅಂದರೆ ಸರಿಯಲ್ಲ. ದಾವಾ ವಿಪಿಸಿ ಆಸ್ತಿಗೆ ಮಾರುಕಟ್ಟೆ ಬೆಲೆ 30 ಲಕ್ಷ ರೂಪಾಯಿ ಆಗುತ್ತದೆ ಅಂದರೆ ಸರಿಯಲ್ಲ. ದಾವಾ ಆಸ್ತಿಗಳ ಒಟ್ಟು ಮಾರುಕಟ್ಟೆಯ ಬೆಲೆಯು ಕನಿಷ್ಠ 40 ಲಕ್ಷ ರೂಪಾಯಿ ಆಗುತ್ತದೆ ಅಂದರೆ ಸರಿಯಲ್ಲ. ದಾವಾ ಜಮೀನು ಆಸ್ತಿಯ

ಚಕಬಂದಿಯನ್ನು ನಾನು ನಮೂದು ಮಾಡಿಲ್ಲ ಎಂದರೆ ಸಾಕ್ಷಿಯು ಯಾವುದೇ ಉತ್ತರ ನೀಡುತ್ತಿಲ್ಲ. ನಾನು ಜಮೀನಿನ ಕಬ್ಜೆಯಲ್ಲಿ ಇರದ ಕಾರಣ ನನಗೆ ದಾವಾ ಜಮೀನಿನ ಚಕಬಂದಿ ಗೊತ್ತಿಲ್ಲ ಅಂದರೆ ಸರಿಯಲ್ಲ.

9) ಆಸ್ತಿ ಸಂಖ್ಯೆ 416/7 ರ ಸಂಬಂದ ಎಲ್ಲಾ ಸಂಗತಿಗಳನ್ನು ನನಗೆ ಅನುಕೂಲವಾಗುವಂತೆ ತಿರುಚಿ ದಾವೆ ಸಲ್ಲಿಸಿರುತ್ತೇನೆ ಅಂದರೆ ಸರಿಯಲ್ಲ. ನನ್ನ ವಾದ ಪತ್ರದ 13 ನೇ ಕಂಡಿಕೆಯಲ್ಲಿ ಉಲ್ಲೇಖಿಸಿದ ಬಕ್ಷಿಸ ಪತ್ರದ ಬಗ್ಗೆ ನಾನು ಸುಳ್ಳು ನುಡಿದಿರುತ್ತೇನೆ ಅಂದರೆ ಸರಿಯಲ್ಲ. ಪುಂಡಲಿಕಪ್ಪ ಗಂಗವ್ವನ ಗಂಡನಿರುತ್ತಾನೆ. ಸಾಕ್ಷಿಗೆ ಈಗ ವಾದ ಪತ್ರದ 13 ನೇ ಕಂಡಿಕೆಯ 6 ನೇ ಸಾಲನ್ನು ಓದಿ ಅದರಲ್ಲಿ ನಾನು ಪುಂಡಲಿಕಪ್ಪ 4 ನೇ ಪ್ರತಿವಾದಿಯ ಗಂಡ ಎಂದು ನಮೂದು ಮಾಡಿರುತ್ತೇನೆ ಎಂದರೆ ಸಾಕ್ಷಿಯು ಅದು ಸರಿಯಲ್ಲ ಎಂದು ನುಡಿಯುತ್ತಾರೆ. ನನ್ನ ವಾದ ಪತ್ರದ ವಂಶಾವಳಿಗೆ ಹಾಗೂ 13 ನೇ ಕಂಡಿಕೆಗೆ ಯಾವುದೇ ಹೊಂದಾಣಿಕೆ ಇಲ್ಲಾ ಅಂದರೆ ಸರಿಯಲ್ಲ. ನನಗೆ ದಾವಾ ಆಸ್ತಿಗಳ ಬಗ್ಗೆ ಯಾವುದೇ ಮಾಹಿತಿ ಇಲ್ಲದ ಕಾರಣ ನಾನು ಸದರಿ ಅಸಂಮಜಸ ಸಂಗತಿಗಳನ್ನು ನಮೂದು ಮಾಡಿರುತ್ತೇನೆ ಅಂದರೆ ಸರಿಯಲ್ಲ.

10) ಪುಂಡಲಿಕಪ್ಪನು ಯಾವ ದಿನಾಂಕದಂದು ಬಕ್ಷಿಸ ಪತ್ರ ಮಾಡಿರುತ್ತಾನೆ ಎಂದು ನನಗೆ ಗೊತ್ತಿಲ್ಲ. ಪುಂಡಲಿಕಪ್ಪನು ದಿನಾಂಕ 26-07-2018 ರಂದು ಬಕ್ಷಿಸ ಪತ್ರ ಮಾಡಿರುತ್ತಾನೆ ಎಂದರೆ ಸಾಕ್ಷಿಯು ಬಕ್ಷಿಸ ಪತ್ರ ಇರುತ್ತದೆ ಅದು ಆದ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ಪುಂಡಲಿಕಪ್ಪನು 4 ನೇ ಪ್ರತಿವಾದಿಯಾದ ಬಸವ್ವ ರವರಿಗೆ ಯಾವಾಗ ಬಕ್ಷಿಸ ಪತ್ರ ಮಾಡಿರುತ್ತಾನೆ ಎಂದು ಗೊತ್ತಿಲ್ಲ. ಸದರಿ ಪುಂಡಲಿಕಪ್ಪನು 4 ನೇ ಪ್ರತಿವಾದಿಯಾದ ಬಸವ್ವ ರವರಿಗೆ ದಿನಾಂಕ 18-07-2019 ರಂದು ಬಕ್ಷಿಸ ಪತ್ರ ಮಾಡಿ ಕೊಟ್ಟಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ. ಸದರಿ ವಿಷಯ ನನಗೆ ಅಂದು ತಿಳಿದು ಬಂದಿರುತ್ತದೆ ಅಂದರೆ ಸರಿಯಲ್ಲ. ಸದರಿ ದಾಖಲೆಯಾದ 3 ವರ್ಷದ ನಂತರದಲ್ಲಿ ನನಗೆ ತಿಳಿದು ಬಂದಿರುತ್ತದೆ. ನಾನೇ ಸ್ವತಃ ದಿನಾಂಕ 18-07-2019 ರಂದು ಮುಂದೆ ನಿಂತು ಬಕ್ಷಿಸ ಪತ್ರ ಮಾಡಿಸಿದ್ದರೂ ಸಹ ಗೊತ್ತಿಲ್ಲ ಎಂದು ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ಸದರಿ ಬಕ್ಷಿಸ ಪತ್ರಕ್ಕೆ ಪುಂಡಲಿಕಪ್ಪನ ಮಗಳಾದ 3 ನೇ ಪ್ರತಿವಾದಿಯು ಸಾಕ್ಷಿದಾರರಾಗಿ ಸಹಿ ಮಾಡಿರುತ್ತಾರೆ ಎಂದರೆ ಸರಿಯಲ್ಲ.

11) ಪುಂಡಲಿಕಪ್ಪನು ಮರಣದ ಪೂರ್ವದಲ್ಲಿ ಕ್ಯಾನ್ಸರನಿಂದ ಬಳಲುತ್ತಿದ್ದನು ಅಂದರೆ ಸರಿಯಲ್ಲ. 4 ನೇ ಪ್ರತಿವಾದಿಯು ಪುಂಡಲಿಕಪ್ಪನ ಕ್ಯಾನ್ಸರನಿಂದ ಆದ ಅನಾರೋಗ್ಯದಲ್ಲಿ ಅವರ ಜೋಪಾಣ ಮಾಡಿದ ಕಾರಣ ಪ್ರೀತಿ ಹಾಗೂ ವಾತ್ಸಲ್ಯದಿಂದ ಪುಂಡಲಿಕಪ್ಪನು 4 ನೇ ಪ್ರತಿವಾದಿಗೆ ಬಕ್ಷಿಸ ಪತ್ರ ಮಾಡಿಕೊಟ್ಟಿರುತ್ತಾನೆ ಅಂದರೆ ಸರಿಯಲ್ಲ. ಪುಂಡಲಿಕಪ್ಪನ ಮಗಳಾದ 3 ನೇ ಪ್ರತಿವಾದಿ

ಹಾಗೂ ನನ್ನ ನಡುವೆ ಒಳ್ಳೆಯ ಬಾಂದವ್ಯವಿರುತ್ತದೆ. 3 ನೇ ಪ್ರತಿವಾದಿಯು ಮನೆತನದ ವಿರುದ್ಧವಾಗಿ ವಿವಾಹವಾಗಿರುತ್ತಾಳೆ ಅಂದರೆ ಸರಿಯಲ್ಲ. ಸದರಿ 3 ನೇ ಪ್ರತಿವಾದಿಗೆ ಮನೆತನದ ವಿರುದ್ಧ ವಿವಾಹ ಆಗಲು ನಾನು ಸಹಾಯ ನೀಡಿರುತ್ತೇನೆ ಅಂದರೆ ಸರಿಯಲ್ಲ. ಸದರಿ ಕೃತ್ಯದಿಂದ ಪುಂಡಲಿಕಪ್ಪನಿಗೆ ಅನಾರೋಗ್ಯ ಉಂಟಾಗಿ ಕ್ಯಾನ್ಸರ ರೋಗ ಬಂದು ಮರಣ ಹೊಂದಿರುತ್ತಾನೆ ಅಂದರೆ ಸರಿಯಲ್ಲ.

12) 3 ನೇ ಪ್ರತಿವಾದಿಯ ಪ್ರಚೋದನೆಯಿಂದ ನಾನು ಸದರಿ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆ ಅಂದರೆ ಸರಿಯಲ್ಲ. ಸಾಕ್ಷಿಗೆ ವಾದ ಪತ್ರದ ವಂಶಾವಳಿಯನ್ನು ತೋರಿಸಿ ಓದಿ ಅದರಲ್ಲಿ ಮೂಲ ಪುರುಷ ಸಂಗಪ್ಪ ಪ್ರತಿವಾದಿ ಸಂಖ್ಯೆ 2 ಎಂದು ಉಲ್ಲೇಖ ಮಾಡಲಾಗಿರುತ್ತದೆ ಎಂದರೆ ಸರಿ ಎಂದು ನುಡಿದು ನಂತರ ಸರಿಯಲ್ಲ ಎಂದು ನುಡಿಯುತ್ತಾರೆ. ಸದರಿ ವಂಶಾವಳಿಯಲ್ಲಿ ಗಂಗವ್ವರವರನ್ನು ಪ್ರತಿವಾದಿ ಸಂಖ್ಯೆ 2 ಎಂದು ಉಲ್ಲೇಖ ಮಾಡಲಾಗಿರುತ್ತದೆ ಎಂದು ತೋರಿಸಿ ಓದಿ ಸಾಕ್ಷಿಯು ಅದು ಸರಿಯಲ್ಲ ಎಂದು ನುಡಿಯುತ್ತಾರೆ. ನಾನು ಯಾವುದೇ ಮಾಹಿತಿ ಇಲ್ಲದೇ ಇದ್ದ ಕಾರಣ ಸದರಿ ತಪ್ಪು ವಂಶಾವಳಿಯನ್ನು ನಮೂದು ಮಾಡಿರುತ್ತೇನೆ ಅಂದರೆ ಸರಿಯಲ್ಲ.

13) ಕಾಶವ್ವ ರವರನ್ನು ಬಸವ್ವ ರವರು ಜೋಪಾಣ ಮಾಡುತ್ತಾ ಬಂದಿರುತ್ತಾರೆ ಅಂದರೆ ಸರಿಯಲ್ಲ. ನನ್ನ ತಾಯಿಯಾದ ಕಾಶವ್ವ ರವರಿಗೆ ತೊಂದರೆ ನೀಡುವ ಉದ್ದೇಶದಿಂದ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆ ಅಂದರೆ ಸರಿಯಲ್ಲ. ಬಸವ್ವ ರವರು ತವರೂ ಮನೆಯ ಕುಟುಂಬದ ಎಲ್ಲಾ ವ್ಯವಹಾರವನ್ನು ನೋಡುತ್ತಾ ಬಂದಿರುತ್ತಾರೆ ಅಂದರೆ ಸರಿಯಲ್ಲ. ನಾನು ನನ್ನ ತಂದೆ ತಾಯಿಯ ಜೋಪಾಣ ಹಾಗೂ ಔಷದೋಪಚಾರ ಮತ್ತು ಇತರೆ ಬಾದ್ಯಸ್ಥಿತಿಕೆಗಳನ್ನು ಮಾಡಿರುವುದಿಲ್ಲ ಅಂದರೆ ಸರಿಯಲ್ಲ. ಕಾಶವ್ವ ರವರು ಬ್ಯಾಳಾಳದಲ್ಲಿ ನನ್ನ ಸಹೋದರ ಹಾಗೂ ಆತನ ಹೆಂಡತಿಯ ಸಂಗಡ ವಾಸವಿರುತ್ತಾಳೆ. ಸದರಿ ವಿಷಯವನ್ನು ನಾನು ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

14) ನಾನು ನನ್ನ ವಿವಾಹದ ಸಮಯದಲ್ಲಿ ಹಣ ಹಾಗೂ ಬಂಗಾರವನ್ನು ಪಡೆದು ನನ್ನ ಹಕ್ಕನ್ನು ತೆರೆದು ಈಗ ಕಲ್ಲವ್ವ ರವರ ಪ್ರಚೋದನೆಯ ಮೇರೆಗೆ ಸುಳ್ಳು ದಾವೆ ಸಲ್ಲಿಸಿರುತ್ತೇನೆ ಅಂದರೆ ಸರಿಯಲ್ಲ. ನಾನು 4 ನೇ ಪ್ರತಿವಾದಿಯಾದ ಬಸವ್ವ ರವರಿಗೆ ನನ್ನ ವಕೀಲರ ಮೂಲಕ ಸುಳ್ಳು ಸಂಗತಿಗಳನ್ನು ಮುಂದೆ ಮಾಡಿ ಸುಳ್ಳು ನೋಟಿಸನ್ನು ನೀಡಿದ್ದು ಅದಕ್ಕೆ 4 ನೇ ಪ್ರತಿವಾದಿಯು ಸರಿಯಾದ ಉತ್ತರ ನೀಡಿದರೂ ಸಹ ನಾನು ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆ ಅಂದರೆ ಸರಿಯಲ್ಲ. ದಿನಾಂಕ 18-07-2019 ರಂದು ಬಕ್ಷಿಸ ಪತ್ರವು ನನಗೆ ಅಂದಿನ ದಿನದಂದು ತಿಳಿದಿದ್ದ ಕಾರಣ ಸದರಿ ದಾಖಲೆಯ ವಿರುದ್ಧ ಈ ದಾವೆಯು ಕಾಲಪರಿಮಿತಿಯಲ್ಲಿ ಬರುವುದಿಲ್ಲ

ಅಂದರೆ ಸರಿಯಲ್ಲ. ದಿನಾಂಕ 26-07-2018 ರಂದು ಬಕ್ಷಿಸ ಪತ್ರವು ನನಗೆ ಅಂದಿನ ದಿನದಂದು ತಿಳಿದಿದ್ದ ಕಾರಣ ಸದರಿ ದಾಖಲೆಯ ವಿರುದ್ಧ ಈ ದಾವೆಯು ಕಾಲಪರಿಮಿತಿಯಲ್ಲಿ ಬರುವುದಿಲ್ಲ ಅಂದರೆ ಸರಿಯಲ್ಲ. ನನಗೆ ದಾವಾ ಆಸ್ತಿಯಲ್ಲಿ ಯಾವುದೇ ಹಕ್ಕು ವ ಹಿತಾಸಕ್ತಿ ಇರುವುದಿಲ್ಲ ಅಂದರೆ ಸರಿಯಲ್ಲ. ನನ್ನ ದಾವೆಯು ಕಾಲಪರಿಮಿತಿ ಅಧಿನಿಯಮದ ಅಡಿಯಲ್ಲಿ ಬರದೇ ಇದ್ದ ಕಾರಣ ಪರಿಹಾರ ಪಡೆಯಲು ನನಗೆ ಕಾನೂನು ಅರ್ಹತೆ ಇಲ್ಲಾ ಅಂದರೆ ಸರಿಯಲ್ಲ.

<u>ಮರು ವಿಚಾರಣೆ ಃ ಇಲ್ಲಾ.</u>

*(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)*

**ಓ. ಹೇ. ಕೇ. ಸರಿ. ಇದೆ.**

(ನವೀನ ಎಫ್. ಡಿಸೋಜಾ)

**ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ.**

**ನವಲಗುಂದ.**